ಸೋಲಿಸಿದಿರಿ. ಒಳಗೆ ಯೋಗಿಯಾಗಿ, ಹೊರಗೆ ತ್ಯಾಗಿಯಾಗಿ ಎಲ್ಲವನ್ನೂ ಅಂತರಾತ್ಮನಿಗೆ ಒಪ್ಪಿಸಿದ್ದರಿಂದ ಬೇಡಿದ್ದೆಲ್ಲವೂ ನಿಮ್ಮ ಉಡಿಯಲ್ಲಿ ಬಂತು; ಬೇಕಾದುದೆಲ್ಲವೂ ನಿಮ್ಮ ಅಡಿಯಲ್ಲಿ ಬಿತ್ತು.

ಬಾಪು: ನನ್ನದು ದೆವ್ವನ ಕೆಲಸ. ಬತ್ತಲೆ ಮೈಯಿಂದ ದೇಶದೇಶ ಅಲೆದೆನು; ಘನಘೋರ ಉಪವಾಸ ಮಾಡಿದೆನು; ಆಶ್ರಮ ಕಟ್ಟಿದೆನು; ಸೆರೆಮನೆಯಲ್ಲಿ ಬಿದ್ದೆನು. ಉರುವಲಾಗಿ ಬಿದ್ದ ಕಂಬಿಗಳನ್ನು ರಾಟೆ ಮಾಡಿ ತಿರುಹಿದೆನು, ಸತ್ಯಾಗ್ರಹವೆಂದೆನು; ಅಸಹಕಾರವೆಂದೆನು; ಕಾಯ್ದೆಭಂಗವೆಂದೆನು; ಪಿಕೆಟಿಂಗ್ ಎಂದೆನು; ಚಲೆಜಾವ್ ಎಂದೆನು. ಇವೆಲ್ಲ ದೆವ್ವಭೂತಗಳ ಕೆಲಸವೆಂದೇ ತೋರುವಂತಿದೆ. ನಿಜವಾಗಿಯೂ ಪರಮೇಶ್ವರನ ಬೆಂಬಲ ನಿಮಗಿದ್ದುದರಿಂದ ಸಂಗಮನಾಥನು ಕೈಕೊಟ್ಟು ನಡೆಸಿದ್ದರಿಂದ ನೀವು ಕಲ್ಯಾಣಕ್ಕೆ ಬಂದಿರಿ; ಮಂತ್ರಿಪದವನ್ನು ಕೈಕೊಂಡಿರಿ. ಕುಳಿತಲ್ಲಿಯೇ ಸರ್ವಶಕ್ತಿಗಳೂ ನಿಮ್ಮೆಡೆಗೆ ಧಾವಿಸಿದವು. ಕರ್ನಾಟಕವಷ್ಟೇ ಕಾರ್ಯಕ್ಷೇತ್ರವಾದರೂ, ಕಲ್ಯಾಣವೇ ನೆಲೆಯಾಗಿದ್ದರೂ, ಅಂಗೈ ಲಿಂಗದಲ್ಲಿಯೇ ದೃಷ್ಟಿಯಿರಿಸಿದ್ದರೂ, ಭಾರತದ ಜೀವಾಳವೇ ಎಚ್ಚೆತ್ತು ಎಳೆದುಬಂತು; ಸರ್ವ ಕಲ್ಯಾಣಗಳೂ ಉದಿಸಿದವು; ಸರ್ವಸಿದ್ಧಿಗಳೂ ಹಸ್ತಗತವಾದವು. ಇದಕನ್ನಬೇಕು ಕಾರ್ಯವೆಂದು. ಸಿದ್ಧಿಯೆಂದರೂ ಇದೇ; ಯಶಸ್ಸೆಂದರೂ ಇದೇ.

ಅಣ್ಣ: ನಾನು ಒಳಗೆ ಇಳಿದು ಮೂಲವನ್ನು ಅಲ್ಲಾಡಿಸುವುದಕ್ಕೆ ಪ್ರಯತ್ನಿಸಿದರೆ ನೀವು ತುದಿಗೇರಿ ಮರವನ್ನೇ ಅಲ್ಲಾಡಿಸಿಬಿಟ್ಟರಿ. ಒಂದು ಭಕ್ತಿಯ ಹೆಣ್ಣು ದಾರಿ; ಇನ್ನೊಂದು ಕರ್ಮದ ಗಂಡುದಾರಿ.

ಬಾಪು: ಅಂತೆಯೇ ನಿಮಗೆ ಸಂಗಮನಾಥ ಕೈಪಿಡಿ; ನನಗೆ ಭಗವದ್ಗೀತೆ ಕೈಪಿಡಿ.

ಅಣ್ಣ: ಸಂಗಮನಾಥನನ್ನು ನಾನು ಹಿಡಿದುಕೊಳ್ಳದೆ, ಆತನೇ ನನ್ನನ್ನು ಹಿಡಿದುಕೊಳ್ಳುವಂತೆ ಎಚ್ಚರವಹಿಸಿದ್ದರೂ ದಲಿತೋದ್ಧಾರದ ತೊಡಕಿನಲ್ಲಿ ಕೈದುಡುಕಿದಂತೆಯೇ ಆಯಿತು. ಆ ತುತ್ತು ಆರಿಸಿ ಬಾಯಿಗಿಡಬೇಕಾಗಿತ್ತೆಂದು ತೋರುತ್ತದೆ.

ಬಾಪು: ನೀವು ಕೈಹಾಕಿದಾಗ ಆ ಪ್ರಶ್ನೆ ಬಿಸಿಬಿಸಿಯಾಗಿತ್ತು; ನಾನು ಕೈಹಚ್ಚುವಾಗ ಆರಿ ತಣ್ಣಗಾಗಿತ್ತು. ನಿಮ್ಮ ತುತ್ತು ಬಾಯಿ ಸುಟ್ಟಿತು; ನನ್ನ



ತುತ್ತು ಹೊಟ್ಟೆ ಕೆಡಿಸಿತು. ನಾನು ಆ ಜನಕ್ಕೆ 'ಹರಿಜನ' ಎಂದು ಹೆಸರಿಡುವ ಹವ್ಯಾಸಕ್ಕೆ ಏಕೆ ಬಿದ್ದೆನೋ ತಿಳಿಯಲೊಲ್ಲದಾಗಿದೆ.

ಅಣ್ಣ: ದಲಿತರು ತಾವು ಹರಿ(ಯ)ಜನ ಎಂದು ತಿಳಕೊಳ್ಳುವ ಮಟ್ಟಿಗೆ ಆ ಹೆಸರು ಬಹಳ ಒಳ್ಳೆಯದಾಗಿದೆ. ಆದರೆ, ಸವರ್ಣ ಹಿಂದೂಗಳನ್ನು ಹಾಗೆ ಕರೆಯುವಾಗ ಹೊಲೆಯರೆಂದೇ ಅರ್ಥಕೊಡುವಂತಾಗುತ್ತದೆ. ನೀವು ಅವರ ಅಭ್ಯುದಯಕ್ಕಾಗಿ ಭಾರತೀಯ ಪರಂಪರೆಯ ಪರವಾಗಿ ಅದೆಷ್ಟು ಪ್ರಾಯಶ್ಚಿತ್ತ ತೆಗೆದುಕೊಂಡಿರಿ! ಅದೆಷ್ಟು ಪ್ರಾಯೋಪವೇಶನ ಕೈಕೊಂಡಿರಿ!

ಬಾಪು: ಆದರೇನು? ನಾನೆಣಿಸಿದಂತೆ ಯಶಸ್ಸು ದೊರೆಯಲಿಲ್ಲವಲ್ಲ!

ಅಣ್ಣ: ನೀವೆಣಿಸಿದಂತೆ ಯಶಸ್ಸು ದೊರೆಯದಿದ್ದರೂ ಪರಮೇಶ್ವರನೆಣಿಕೆಯಂತೆ ಯಶಸ್ಸು ದೊರೆತದ್ದು ಸುಳ್ಳಲ್ಲ. ಆತನ ನಿಲುಮೆಗಾಗಿ ನಮ್ಮ ದುಡಿಮೆಯಷ್ಟೇ?

ಬಾಪು: ಅದು ಸಾತ್ವಿಕಾಹಂಕಾರದ ಸೋಂಕು. ಹೊರಜೀವನದಲ್ಲಿ ಅನ್ನಿರಿ, ಕರ್ಮಮಾರ್ಗದಲ್ಲಿ ಅನ್ನಿರಿ, ಅಹಂಕಾರದ ಗಾಳಿ ಸೋಂಕದೆ ಉಳಿಯುವುದೇ ಇಲ್ಲ. ಮಂಡೆ ಬೋಳಿಸಿಕೊಂಡು ಗಂಡುದೊತ್ತಾಗಿ ಕೂಡಲಸಂಗನ ನಿಲುಮೆಗೆ ದುಡಿದ ನಿಮ್ಮ ಭಕ್ತಿಭಾಂಡಾರವು, ಈ ಬಡಹೃದಯಕ್ಕೆಲ್ಲಿಂದ ಬರಬೇಕು?

ಅಣ್ಣ: ಹಾಗೆನ್ನಬೇಡಿ. ಕರ್ಮಮಾರ್ಗದಲ್ಲಿ ಜ್ಞಾನವು